## ‘ಕ್ರೌರ್ಯ’ ಪದಬಳಕೆ ಸರಿಯಲ್ಲ

‘ಕೆನ್ನಾಯಿಗಳು ಮತ್ತು ಕ್ರೌರ್ಯ’ (ಮೇ 16, ಶ್ರೀಧರ ಪತ್ತಾರ), ಲೇಖಕರು ಅರಣ್ಯಾಧಿಕಾರಿಯಾಗಿದ್ದು, ಒಂದು ಪ್ರಾಣಿಯ ಆಹಾರ ಕ್ರಮವನ್ನು ‘ಕ್ರೌರ್ಯ’ ಎಂದದ್ದು ಸರಿಯಲ್ಲ. ಹುಲಿ, ಚಿರತೆಯಾದಿ ದೊಡ್ಡ ಮಾಂಸಾಹಾರಿಗಳು ಬಹುತೇಕ ಏಕಾಂಗಿಯಾಗಿ ಆಹಾರ ಸಂಗ್ರಹಿಸುತ್ತವೆ. ಆ ಶಕ್ತಿ, ಸಾಮರ್ಥ್ಯ ಇಲ್ಲದ್ದಕ್ಕೆ ಕೆನ್ನಾಯಿಗಳು ಸಾಂಘಿಕ ಬೇಟೆ ಮತ್ತು ಬಲಿಪಶುವಿನ ಶಕ್ತಿಗುಂದಿಸುವುದನ್ನೇ ರೂಢಿಸಿಕೊಂಡಿವೆ. ದುಷ್ಟ, ಕ್ರೂರ, ವಂಚಕ, ಹಿಂಸ್ರ ಮುಂತಾದ ಕೇವಲ ಮನುಷ್ಯ ಮಾನದಂಡದ ವಿಶೇಷಣಗಳನ್ನು ಅವುಗಳಿಗೆ ಆರೋಪಿಸುವುದು, ಪ್ರಚುರಿಸುವುದು ತಪ್ಪು.

—ಅಶೋಕವರ್ಧನ ಜಿ.ಎನ್., ಮಂಗಳೂರು



## ಹೋರಾಟ ಅನಿವಾರ್ಯ

ಕೆನ್ನಾಯಿಗಳ ಕುರಿತ ಅನುಭವ ಕಥನ ರೋಚಕವಾಗಿತ್ತು. ಅಸಹಾಯಕ ಜಿಂಕೆಯ ತೊಳಲಾಟ ಒಂದು ಕಡೆಯಾದರೆ, ಹಸಿವು ಮತ್ತು ಅಸ್ತಿತ್ವಕ್ಕೆ ಹೋರಾಡುವ ಕೆನ್ನಾಯಿಗಳ ಪಾಡು ಇನ್ನೊಂದೆಡೆ. ಆದರೆ ಈ ಹೋರಾಟ ಅನಿವಾರ್ಯ ಕೂಡ. ಪ್ರಕೃತಿಯ ಸಮತೋಲನಕ್ಕೆ ಪೂರಕವೂ.

—ಸಿಹಿಮೊಗೆ ರಮೇಶ್, ಮೈಸೂರು

## ಪ್ರಕೃತಿಯ ಅದ್ಭುತವಿದು



‘ಹಿಮಾಲಯದ ಹೈದ ಕರಾವಳಿಗೆ ಬಂದಾಗ’ (ಮೇ 16, ಪ್ರಸಾದ ಶೆಣೈ ಆರ್.ಕೆ.) ‘ಪಕ್ಷಿಲೋಕ’ ಲೇಖನದಲ್ಲಿ ನವರಂಗ ಹಕ್ಕಿಯ ಪರಿಚಯ ಅಪೂರ್ವವಾಗಿದೆ. ಇಷ್ಟು ಪುಟ್ಟ ಹಕ್ಕಿ ಹಿಮಾಲಯದಿಂದ ಮಲೆನಾಡಿಗೆ ವಲಸೆ ಬಂದು, ಮತ್ತೆ ಮಳೆಗಾಲದಲ್ಲಿ ಮರಳಿ ಹೋಗುತ್ತದೆಯೆಂಬುದು ಪ್ರಕೃತಿಯ ಒಂದು ಅದ್ಭುತ.

—ರಾಮಚಂದ್ರ ಮರಳ್ಳಿ, ಬೆಂಗಳೂರು




## ಸಿನಿಮಾ ನೋಡಿದ ಅನುಭವ

AI ಗೆಳತಿ! (ಮೇ 16, ಗುರುರಾಜ್ ಎಸ್. ದಾವಣಗೆರೆ) ಮುಖಪುಟ ಲೇಖನ ಓದುತ್ತಾ ಹೋದಂತೆ ಸೈನ್ಸ್ ಫಿಕ್ಷನ್ ಥ್ರಿಲ್ಲರ್ ಸಿನಿಮಾ ನೋಡಿದ ಅನುಭವವಾಯಿತು. ಇತ್ತೀಚಿನ ತಂತ್ರಜ್ಞಾನ ಹೇಗೆ ಮನುಷ್ಯನ ಬದುಕನ್ನು ಪ್ರಭಾವಿಸುತ್ತಿದೆ ಎಂಬುದನ್ನು ನೆನೆದು ಮೈ ಜುಮ್ ಎಂದಿತು. ಜೊತೆಗೆ ಯಾವುದೋ ಅನ್ಯಲೋಕಕ್ಕೆ ಕಾಲಿಟ್ಟಂತೆ ಭಾಸವಾಗಿ ಭಯವೂ ಆಯಿತು. ಸುಂದರ ಮುಖಪುಟ, ಚಿತ್ರಗಳು, ವಿವರಗಳು, ನಡೆದಿರುವ ರೋಚಕ ಘಟನೆಗಳು ಮತ್ತು ಎದುರಾಗುವ ಅಪಾಯಗಳ ಕುರಿತು ಓದಿದಾಗ ಎಐ ತಂತ್ರಜ್ಞಾನದ ವಿಷಯವನ್ನು ಇಷ್ಟು ಸುಲಭವಾಗಿ ಅರ್ಥವಾಗುವಂತೆ ಬರೆದಿರುವ ಲೇಖಕರ ಆಳವಾದ ಅಧ್ಯಯನ ಮತ್ತು ತಜ್ಞತೆ ಕಣ್ಣಿಗೆ ಕಟ್ಟಿತು.

—ಕರ್ಣಂ ಶ್ರೀರಾಮ್ ವಿ., ಹಲವಾಗಿಲು

## ‘ಅತಿ ಬೇಡವೆಲ್ಲಿಯೂ’ ಅಲ್ಲವೇ?

‘AI ಗೆಳತಿ!; ಡಿಜಿಟಲ್ ಲೋಕದಲ್ಲಿ ಮೋಹಕ ಗೆಳತಿಯರು’ ಲೇಖನ ಓದಿ, ವಿಜ್ಞಾನದ ಆವಿಷ್ಕಾರದ ಕುರಿತು ಹೆಮ್ಮೆ ಎನಿಸಿದರೂ, ಆತಂಕ ಉಂಟುಮಾಡಿತು. ಯಂತ್ರಗಳೊಂದಿಗೆ ಭಾವನಾತ್ಮಕ ಸಂಬಂಧ ಬೆಳೆಸಿಕೊಳ್ಳುವುದು ಸಾಧ್ಯವೇ? ಎಂಬ ಆಲೋಚನೆ ಕೂಡ ಬಂದಿತು.

ಈಗಾಗಲೇ ನಾವು ಬಂಧು ಬಳಗದವರೊಂದಿಗೆ ಭೌತಿಕ ಬಾಂಧವ್ಯವನ್ನು ಕಡಿಮೆ ಮಾಡಿಕೊಂಡಿದ್ದೇವೆ. ಕೇವಲ ಮೊಬೈಲ್ ಸಂವಹನಗಳು ನಡೆಯುತ್ತಿವೆ. ಡಿಜಿಟಲ್ ಗೆಳತಿಯರ ಸೇವೆ ಪಡೆಯುವ ಮುನ್ನ ಹಲವಾರು ಬಾರಿ ಯೋಚಿಸುವುದು ಒಳ್ಳೆಯದು. ಡಿ.ವಿ.ಜಿ.ಯವರು ತಿಳಿಸಿದಂತೆ ‘ಅತಿ ಬೇಡವೆಲ್ಲಿಯೂ’ ಅಲ್ಲವೇ?

—ಸು. ವಿಜಯಲಕ್ಷ್ಮಿ, ಶಿವಮೊಗ್ಗ

## ಯುವಜನತೆಗೆ ಮಾದರಿ

‘ಮಿರಾಕಲ್ ಮ್ಯಾನ್’ (ಮೇ 16, ಪ್ರವೀಣ ಕುಲಕರ್ಣಿ) ಆರ್ಮ್‌ಸ್ಟ್ರಾಂಗ್ ಅವರ ಕುರಿತ ‘ಸೆಲೆಬ್ರಿಟಿ’ ಲೇಖನ ತುಂಬಾ ಚೆನ್ನಾಗಿದೆ. ಮಾಡಬೇಕೆಂದಿರುವ ಕೆಲಸವನ್ನು ಅಚ್ಚುಕಟ್ಟಾಗಿ ಮಾಡಿ, ಸಮಾಜಕ್ಕೆ ಅದ್ಭುತ ಕೊಡುಗೆ ನೀಡಿದ್ದಾರೆ. ಅವರು ಮಾಡಲಿ, ಸರ್ಕಾರ ಮಾಡಲಿ ಎಂಬುದನ್ನು ಬಿಟ್ಟು ನಮ್ಮೂರನ್ನು ನಾವೇ ಉತ್ತಮಪಡಿಸೋಣ ಎಂಬ ಇವರ ನಡೆ ಯುವಜನತೆಗೆ ಮಾದರಿ.

—ಧನಲಕ್ಷ್ಮಿ

## ತಪ್ಪು ಮಾಹಿತಿ

‘ಯಕ್ಷಲೋಕದಲ್ಲಿ ಕೀರ್ತಿ ಶಿಖರಕ್ಕೇರಿದ್ದ ಧಾರೇಶ್ವರ’ (ಮೇ 16, ಉಮಾ ವೇಣೂರು), ಯಕ್ಷ ಭಾಗವತ ಸುಬ್ರಹ್ಮಣ್ಯ ಧಾರೇಶ್ವರರಿಗೆ ನುಡಿನಮನ ಸಕಾಲಿಕವಾಗಿತ್ತಾದರೂ ಕೆಲವು ತಪ್ಪು ಮಾಹಿತಿ ಒಳಗೊಂಡಿದೆ.

ಆರಂಭದಲ್ಲಿ ಕಾಳಿಂಗ ನಾವುಡರನ್ನು ಉಲ್ಲೇಖಿಸುತ್ತಾ, ನಾವುಡರು ಅಮೃತೇಶ್ವರಿ ಮೇಳದಲ್ಲಿ ಇದ್ದಾಗ ಅಸುನೀಗಿದರು ಎಂದಿದೆ. ಆದರೆ ನಾವುಡರು ಅಮೃತೇಶ್ವರಿ ಮೇಳದಲ್ಲಿ ಇದ್ದರಾದರೂ ಅವರು ಮೃತಪಟ್ಟಿದ್ದು ಸಾಲಿಗ್ರಾಮ ಮೇಳದಲ್ಲಿ. ಹಲವು ವರ್ಷ ವೃತ್ತಿ ಮಾಡಿ ಅದೇ ಮೇಳದಲ್ಲಿ ಉತ್ತುಂಗ ಸ್ಥಿತಿಯಲ್ಲಿದ್ದಾಗ ಮರಣ ಹೊಂದಿದರು. ಬಡಗಿನ ಮೇಳಗಳಲ್ಲಿ ಭಾಗವತರು ಜಾಗಟೆ ಹಿಡಿಯುವುದಿಲ್ಲ, ತಾಳ ಹಿಡಿಯುತ್ತಾರೆ.

—ಬಿಲ್ಲೇಶ್ವರ ಅಚ್ಚು, ಹಂಚ

## ಸುಂದರ ದಿನಗಳು ಈಗೆಲ್ಲಿ?

‘ದನಗಳ ಪರಿಷೆಗೆ ಆಧುನಿಕತೆಯ ಗ್ರಹಣ’ (ಮೇ 16, ಮಂಜುನಾಥ ಅಮಲಗೊಂದಿ) ಲೇಖನ ಓದಿದೆ. ಜಾತ್ರೆ ಕುರಿತು ಹಲವು ನೆನಪುಗಳು ನುಸುಳಿ ಬಂದವು.

ನಾವು ಸಣ್ಣವರಿದ್ದಾಗ ದನಗಳ ಜಾತ್ರೆ ವಿಜಯನಗರ (ಅಂದಿನ ಬಳ್ಳಾರಿ) ಜಿಲ್ಲೆಯ ಚಿಮ್ಮಿಹಳ್ಳಿಯ ಹಳ್ಳದ ಸಾಲು ತೋಪುಗಳ ನಡುವೆ ತಿಂಗಳಾನುಗಟ್ಟಲೆ ನಡೆಯುತ್ತಿತ್ತು. ನಾಡಿನ ಉದ್ದಗಲದಿಂದ ರಾಸು ಮಾರುವವರು, ಕೊಳ್ಳುವವರು ಜಾತ್ರೆಯಲ್ಲಿ ನೆರೆದಿರುತ್ತಿದ್ದರು. ಇಂದು ಹಳ್ಳ–ಕೊಳ್ಳಗಳು ಬತ್ತುವುದರೊಂದಿಗೆ ಕೃಷಿ ಯಂತ್ರೋಪಕರಣಗಳ ಆಗಮನ ಹೋರಿ, ಎತ್ತುಗಳನ್ನು ಕಟ್ಟುವವರನ್ನೂ ಇಲ್ಲದಂತೆ ಮಾಡಿ, ಕೃಷಿಸಂಸ್ಕೃತಿಗೆ, ಜಾತ್ರಾ ಸಾಮರಸ್ಯಕ್ಕೆ ಪೆಟ್ಟು ಕೊಟ್ಟಿದೆ. ಆಗ ಜಾತ್ರೆಗಳಿಂದಲೇ ಜೀವನ ಕಟ್ಟಿಕೊಂಡಿದ್ದ ಅನೇಕ ನಾಟಕ ಕಂಪನಿಗಳು ನೆಲಹಿಡಿದವು. ಖಾನಾವಳಿ ಇಟ್ಟುಕೊಂಡವರು ಸಂಪಾದನೆ ಕಳೆದುಕೊಂಡರು. ಅಂದಿನ ದನಗಳ ಪರಿಷೆಯ ಸುಂದರ ದಿನಗಳು ಈಗೆಲ್ಲಿ?

—ಕೊಹಿಮ ಬಸರಕೋಡು



**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in